# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ-190, ಮಂಗಮ್ಮನಪಾಳ್ಯ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಮಾನ್ಯ ನೋಡಲ್ ಅಧಿಕಾರಿ/ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 09.02.2021 ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು 190-ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಬೆಯಲ್ಲಿ ಹಾಜರಿದ್ದ ಸದಸ್ಯರು/ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ |
|---|---|---|
| 1 | ಶ್ರೀ ಹನುಮಂತರಾಯ ಟಿ. | ಅಧ್ಯಕರು/ ನೋಡಲ್ ಅಧಿಕಾರಿಗಳು |
| 2 | ಶ್ರೀ ರವಿ ಡಿ | ಸಂಚಾಲಕರು/ ಕಾರ್ಯದರ್ಶಿಗಳು |
| 3 | ಶ್ರೀಮತಿ ಲಕ್ಷ್ಮೀ ಬಿ | ಸ.ಕಂ.ಅ ಹೆಚ್.ಎಸ್.ಆರ್ ಉಪವಿಭಾಗ |
| 4 | ಶ್ರೀ ಸಾಯಬಣ್ಣ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 5 | ಶ್ರೀ ವಿಜಯಕುಮಾರ್ ಡಿ. | ಕಿರಿಯ ಅಭಿಯಂತರರು, ಬೇಸ್ಕಾಂ |
| 6 | ಶ್ರೀ ರಮೇಶ್ ಡಿ | ಕಿ.ಅ. ವಿದ್ಯುತ್ ವಿಭಾಗ |
| 7 | ಶ್ರೀ ವಿನೋದ್ ಜಿ. | ಹಿರಿಯ ಆರೋಗ್ಯ ಪರಿವೀಕ್ಷಕರು. |
| 8 | ಶ್ರೀ ನರಸಪ್ಪ ಹೆಚ್. | ತೋಟಗಾರಿಕೆ ನಿರ್ವಹಣೆ ಪರಿವೀಕ್ಷಕರು |
| 9 | ಶ್ರೀ ಹೊನ್ನುರ ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 10 | ಶ್ರೀ ಶಿವಕುಮಾರ್ ಎಲ್ | ಮಾರ್ಷಲ್ ವಾರ್ಡ್ ನಂ. 190 |
| 11 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು |
| 12 | ಶ್ರೀ ಉಮೇಶ್ ಎಸ್. | ಸದಸ್ಯರು |
| 13 | ಶ್ರೀ ಗೋಪಿನಾಥ | ಸದಸ್ಯರು |
| 14 | ಶ್ರೀ ಸ್ಯೆಯದ್ ಸಲಾಂ | ಸದಸ್ಯರು |
| 15 | ಶ್ರೀ ಚಂದ್ರ ರೆಡ್ಡಿ | ಸದಸ್ಯರು |
| 16 | ಶ್ರೀ ಶಂಕರ್ ಎನ್ | ಸದಸ್ಯರು |

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ಟಿ ಹನುಮಂತರಾಯ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು, ಅಧ್ಯಕ್ಷರು ವಾರ್ಡ್ ಸಭೆಗೆ ಹಾಜರಾಗಿದ್ದ ಸದಸ್ಯರಿಗೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಪ್ರಸ್ತಾಪಿಸಲು ಕೋರಿದರು.

Scanned with Car

| ಕ್ರ ಸಂ | ಇಲಾಖೆ | ವಿಷಯ |
|---|---|---|
| 1 | **ಘನತ್ಯಾಜ್ಯ (ಆರೋಗ್ಯ) ಇಲಾಖೆ** | • ವಾರ್ಡ್ ವ್ಯಾಪ್ತಿಯಲ್ಲಿ ಮಾಂಸದ ತ್ಯಾಜ್ಯವನ್ನು ರಸ್ತೆಯಲ್ಲಿ ಸುರಿಯುತ್ತಿದ್ದು, ಸುರಿಯುತ್ತಿರುವರಿಗೆ ದಂಡ ವಿಧಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಸಂಡೆ ಬಜಾರ ಪುನರ್ ಪ್ರಾರಂಭಿಸುವ ಸಾಧ್ಯತೆಗಳಿರುವುದರಿಂದ ಪೋಲಿಸ್ ರವರಿಗೆ ಪತ್ರವನ್ನು ಬರೆದ್ದು, ಪೋಲಿಸ್ ಸಿಬ್ಬಂದಿ ಮತ್ತು ಬಿ.ಬಿ.ಎಂ.ಪಿ ಸಿಬ್ಬಂದಿಗಳ ಸಹಕಾರದೊಂದಗೆ ಮಳಿಗೆಗಳನ್ನು ತೆರೆಯದಂತೆ ಮುನ್ನೇಚರಿಗೆ ಕ್ರಮವನ್ನು ವಹಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ಗೋ ನಿಷೇದ ಕಾಯ್ದೆ ವಿರುದ್ಧ ಅಕ್ರಮವಾಗಿ ನಡೆಸುತ್ತಿರುವ ಮಾಂಸದ ಅಂಗಡಿಗಳನ್ನು ಮುಚ್ಚಿಸಲು ಕ್ರಮವಹಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು,** |
| 2 | **ತೋಟಗಾರಿಕೆ ಇಲಾಖೆ.** | • ಬೇಸಿಗೆ ಕಾಲ ಪ್ರಾರಂಭವಾಗುವುದರಿಂದ ವಾರ್ಡ್ ವ್ಯಾಪ್ತಿಯ ಐಟಿಐ ಬಡಾವಣೆಯ ಉದ್ಯಾನವನದಲ್ಲಿ ಗಿಡಗಳಿಗೆ ನೀರು ~~ಸುರಿವಂತೆ~~ ಹಾಯಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಉದ್ಯಾನವನಗಳನ್ನು ಅಭಿವದ್ಧಿ/ ನವೀಕರಣಗೊಳಿಸುವಂತೆ ಸದಸ್ಯರು ಕೋರಿರುತ್ತಾರೆ.<br>ಕ್ರಮ ತೋಟಗಾರಿಕೆ ನಿರ್ವಹಣೆ ಪರಿವೀಕ್ಷಕರು |
| 3 | **ಬಿ.ಡಬ್ಲ್ಯೂ.ಎಸ್.ಎಸ್.ಬಿ** | • ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಪೈಪ್ ಲೈನ್ ಕಾಮಗಾರಿ ಕೈಗೆತ್ತಿಕೊಂಡು ಶೇ 50 % ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಐಟಿಐ ಮುಖ್ಯ ರಸ್ತೆಯಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು, ವೆಟ್‌ಮಿಕ್ಸ್ ಹಾಕುವಂತೆ ಸದಸ್ಯರು ಕೋರಿರುತ್ತಾರೆ.<br>• ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು 2020-21ನೇ ಕ್ರಿಯಾಯೋಜನೆ ಸಲ್ಲಿಸಿ ಕಾರ್ಯದೇಶ ನೀಡಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಸದಸ್ಯರು ಕೋರಿರುತ್ತಾರೆ.<br>• ಹೊಸಪಾಳ್ಯ ರಸ್ತೆಯಲ್ಲಿರುವ ವಿದ್ಯುತ್ ಚಿತಗಾರ ಹತ್ತಿರ ಮ್ಯಾನ್‌ಹೋಲ್ ಕವರ್ ಒಡೆದು ದುರ್ವಾಸನೆ ಬಿರುತ್ತಿದೆಂದು ಸದಸ್ಯರು ಸಭೆಯಲ್ಲಿ ತಿಳಿಸಿರುತ್ತಾರೆ.<br>**ಕ್ರಮ : ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ** |
| 4 | **ಕಂದಾಯ ವಿಭಾಗ** | • ವಾರ್ಡ್ ವ್ಯಾಪ್ತಿಯ ಮಂಗಮ್ಮನಪಾಳ್ಯ ಕೆರೆ ಸರ್ವೆ ಸಂಖ್ಯೆ: 19ರಲ್ಲಿ 7 ಎಕರೆ 29 ಗುಂಟೆ ಜಾಗವಿದ್ದು ಕೆರೆಯ ಜಾಗದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಿದ್ದು, ಈ ಕಟ್ಟಡಕ್ಕೆ ಕಂದಾಯ ಅಕ್ರಮವಾಗಿ ಪಾವತಿಸುತ್ತಿದ್ದು ಹಾಗೂ ಖಾತಾ ಪ್ರಮಾಣ ಪತ್ರವನ್ನು ಸಹ ಪಡೆದಿರುತ್ತಾರೆ. ಪರಿಶೀಲಿಸಿ |

Scanned with Car

| | | |
|---|---|---|
| | | ಕಾನೂನು ರೀತಿ ಕ್ರಮವಹಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಹೊಸಪಾಳ್ಯ ಇಂಡಸ್ಟ್ರಿಯಲ್ ಪ್ರದೇಶ ಹಾಗೂ ಸುತ್ತಮುತ್ತಿಲಿನ ಪ್ರದೇಶದಲ್ಲಿ ಕಟ್ಟಡಗಳು ಬಹುಮಡಿಗಳ ಕಟ್ಟಡವಾಗಿದ್ದು, ಆದರೆ ಕಂದಾಯವನ್ನು 1ನೇ ಮತ್ತು 2ನೇ ಮಹಡಿಗಳಿಗೆ ಮಾತ್ರ ಪಾವತಿಸುತ್ತಿದ್ದಾರೆ, ಹಾಗೂ ಹೆಚ್ಚುವರಿ ಮಹಡಿಗಳ ಕಂದಾಯ ಪಾವತಿಸುತ್ತಿಲ್ಲವೆಂದು ವಾರ್ಡ್ ಸದಸ್ಯರು ಸಭೆಯ ಗಮನಕ್ಕೆ ತಂದಿರುತ್ತಾರೆ. |
| 5 | ಕಾಮಗಾರಿ | • ಹಿಂದಿನ ಸಭೆಯಲ್ಲಿ ಚರ್ಚಿಸಿರುವಂತೆ ವಿಷಯಗಳ ಬಗ್ಗೆ ಕ್ರಮ ವಹಿಸಲಾಗುತ್ತಿದೆ ಎಂದು ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿರುತ್ತಾರೆ.<br>ಕ್ರಮ: ಸ.ಅ. ವಾರ್ಡ್ ನಂ. 190. |
| 6 | ಯೋಜನೆ ವಿಭಾಗ | • ಡೈಗ್ನಾಸ್ಟಿಕ್ ಸೆಂಟರ್, ಪ್ರಾಥಮಿ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಸೂಕ್ತ ಜಾಗವನ್ನು ಗುರುತಿಸಿ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದೆಂದು ಸಹಾಯಕ ಅಭಿಯಂತರರು, ಯೋಜನೆ ವಿಭಾಗ ರವರು ಸಭೆಯಲ್ಲಿ ತಿಳಿಸಿರುತ್ತಾರೆ.<br>**ಕ್ರಮ: ಸ.ಅ. ಯೋಜನೆ ವಿಭಾಗ** |

ಈ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ನಂ. 190

ಅಧ್ಯಕ್ಷರು/ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 190

**ಪ್ರತಿಯನ್ನು:-**

1. ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು(ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
3. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಸಲ್ಲಿಸಿದೆ.
4. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.

Scanned with Car